ತುಂಬ ಚಂದವಾಗಿ ಹೇಳಿಕೊಡುತ್ತಿದ್ದರು. ಈಗೀಗ ಬರುತ್ತಿರುವ ಹೊಸ ಹೊಸ ಸಾಮಾಜಿಕ ಪ್ರಸಂಗಗಳ ಬಗ್ಗೆಯೆಲ್ಲ ಅವರಿಗೆ ವಿರೋಧ ಇತ್ತು. ನೇರವಾಗಿ ನಿಷ್ಠುರವಾಗಿ ತುಂಬ ಕಡೆಗಳಲ್ಲಿ 'ಇಂಥ ಪ್ರಸಂಗಗಳನ್ನೆಲ್ಲ ಮಾಡಬಾರದು' ಎಂದು ಹೇಳುತ್ತಿದ್ದರು. ಹಳೆ ಪ್ರಸಂಗಗಳಲ್ಲಿ ಇರುವಂಥ ಸತ್ವಗಳು ಹೊಸ ಪ್ರಸಂಗಗಳಲ್ಲಿ ಇಲ್ಲ ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಹಾಗಾಗಿ ಅವರು ಯಾವಾಗಲೂ ಹೊಸ ಪ್ರಸಂಗಗಳಿಗೆ ಹಾಡಲೂ ಇಲ್ಲ. ಹಳೆಯ ಶೈಲಿಯನ್ನು ಬಿಡಲೂ ಇಲ್ಲ.

ಉತ್ತರಕನ್ನಡ ಜಿಲ್ಲೆಯಲ್ಲಿ ಹೆಂಗಸರು ಹಾಡು ಹೇಳುವ ಒಂದು ಶೈಲಿ ಉಂಟು. ನೆಬ್ಬೂರರ ಪದ್ಯಗಳಲ್ಲಿ ಆ ಹಾಡಿನ ಲಕ್ಷಣಗಳು ಜಾಸ್ತಿ ಇದ್ದವು. ಹಾಗಾಗಿ ಅವರು ಹಾಡುಗಾರಿಕೆ ಜನರ ಮೇಲೆ ಒಳ್ಳೆಯ ಪರಿಣಾಮವನ್ನೂ ಬೀರುತ್ತಾ ಇತ್ತು. ಅವರದ್ದು ಅತ್ಯದ್ಭುತವಾದಂಥ ಕಂಠ. ಆ ಮೆಲೊಡಿ, ಸಣ್ಣದಾದ ಸ್ವರ ಯಕ್ಷಗಾನ ಲೋಕದಲ್ಲಿ ಮತ್ತೊಬ್ಬರಿಗಿಲ್ಲ. ಅವರು 'ಗಜಮುಖದವನೆ ಗಣಪನೆ...' ಎಂದು ಹೇಳಿದ ಕೂಡಲೇ ಅಲ್ಲೊಂದು ಯಕ್ಷಗಾನದ ವಾತಾವರಣ ನಿರ್ಮಾಣ ಆಗುತ್ತಿತ್ತು. ಅವರ ಸ್ವರವೇ ಹಾಗಿತ್ತು.



ನನ್ನ ಗಾಯನದ ಮೇಲೆಯೂ ಅವರ ಪ್ರಭಾವ ಸ್ವಲ್ಪ ಜಾಸ್ತಿ ಇದೆ. ಹಾಗಾಗಿಯೇ ನನ್ನ ಕಂಡರೆ ಅವರಿಗೆ ಬಹಳ ಇಷ್ಟವಾಗಿತ್ತು. ಹಲವು ಕಡೆಗಳಲ್ಲಿ 'ನನ್ನ ನಂತರ ಯಕ್ಷಗಾನ ಸಾಂಪ್ರದಾಯಿಕ ಶೈಲಿಯ ಹಾಡುಗಾರಿಕೆ ಇರುವುದು ಕೊಳಗಿ ಕೇಶವ ಹೆಗಡೆ ಅವರಿಗೆ ಮಾತ್ರ' ಎಂದು ಹೇಳಿಕೊಂಡಿದ್ದರು. ಆದರೆ ಅವರಿಗೆ ಶಿಷ್ಯರನ್ನು ತಯಾರು ಮಾಡಲಿಕ್ಕೆ ಆಗಲಿಲ್ಲ. ಅವರ ಪ್ರಾಯದ ಕಾಲದಲ್ಲಿ ಮೇಳಗಳ ತಿರುಗಾಟವೇ ಆಗಿಹೋಯ್ತು. ಆರು ತಿಂಗಳ ಮೇಳಗಳು; ಮತ್ತಾರು ತಿಂಗಳು ಬೆಂಗಳೂರು, ಮುಂಬೈ ಹೀಗೆ ಹೊರಗಡೆ ತಿರುಗಾಟ ಮಾಡುತ್ತಿದ್ದರು. ನಂತರದ ದಿನಗಳನ್ನು ನೆಬ್ಬೂರಿನಲ್ಲಿ ಕಳೆದರು. ಶಿರಸಿಯಿಂದ ಕುಮಟಾ ರಸ್ತೆಯಲ್ಲಿ ಕೊಂಚ ಒಳಗೆ ಹೋದರೆ ನೆಬ್ಬೂರು ಸಿಗುತ್ತದೆ. ಅದೊಂದು ಚಿಕ್ಕ ಹಳ್ಳಿ. ಅಲ್ಲಿ ಹೋಗಿ ಭಾಗವತಿಕೆ ಕಲಿಯಲು ಯಾರೂ ಮುಂದೆ ಬರುವುದಿಲ್ಲ. ಹಾಗಾಗಿ ಅವರಿಗೆ ಶಿಷ್ಯವರ್ಗವನ್ನು ಬೆಳೆಸಲು ಸಾಧ್ಯವಾಗಲಿಲ್ಲ. ಅವರು ತೀರಿಕೊಳ್ಳುವ ಎಂಟು ದಿನಗಳ ಮೊದಲು ಶಿರಸಿಯ ಸಮೀಪದ ಒಂದು ಹಳ್ಳಿಯಲ್ಲಿ ನಾನು ಅವರು ಒಟ್ಟಿಗೇ ಪದ್ಯ ಹೇಳಿದ್ದೆವು. ವರ್ಷಕ್ಕೆ ಹತ್ತು–ಹನ್ನೆರಡು ತಾಳಮದ್ದಲೆಗಳಲ್ಲಿ ನಾವು ಒಟ್ಟಿಗೇ ಭಾಗವತಿಕೆ ಮಾಡುತ್ತಿದ್ದೆವು. ಇತ್ತೀಚೆಗೆ ಅವರಿಗೆ ನಾಲ್ಕಾರು ಹಾಡು ಹೇಳಿದ ಹಾಗೆ ಸುಸ್ತಾಗುತ್ತಿತ್ತು. ಅದಕ್ಕೆ ಅವರು ಯಾರಾದರೂ ಭಾಗವತಿಕೆ ಮಾಡಲು ಕರೆದರೆ 'ಕೊಳಗಿ ಅವರಿಗೂ ಹೇಳಿಬಿಡಿ. ನಾವಿಬ್ಬರೂ ಸೇರಿ ಮಾಡ್ತೇವೆ' ಎಂದು ಹೇಳಿಬಿಡುತ್ತಿದ್ದರು. ಅವರಿಗೆ ಸುಸ್ತಾದ ಮೇಲೆ ನಾನು ಹಾಡಲು ಕುಳಿತುಕೊಳ್ಳುತ್ತಿದ್ದೆ.

## ನಿಧಾನಲಯದ ಭಾವಮಾಧುರ್ಯ

ಯಕ್ಷಗಾನ ಭಾಗವತಿಕೆಯಲ್ಲಿ ಜೋರು ಪದ್ಯ ಹೇಳಿ ಆಕರ್ಷಕ ಮಾಡುವುದು ಸುಲಭ. ಆದರೆ ನಿಧಾನಲಯದಲ್ಲಿ ಹೇಳಿ ಪದ್ಯಕ್ಕೆ ಭಾವ ತುಂಬುವುದು ಬಹಳ ಕಷ್ಟ. ಆ ತಾಕತ್ತು ನೆಬ್ಬೂರರಲ್ಲಿ ಮಾತ್ರ ಇತ್ತು. ನೆಬ್ಬೂರರು ಹಾಡ್ತಾರೆ ಅಂದ್ರೆ ಎಲ್ಲ ಕಲಾವಿದರಿಗೂ ಬಹಳ ಪ್ರೀತಿ. ಯಾಕೆಂದರೆ ಅವರು ರಂಗಸ್ಥಳದಲ್ಲಿ ಕಲಾವಿದರನ್ನು ನಡೆಸಿಕೊಳ್ಳುವ ರೀತಿ ಹಾಗೆಯೇ ಇರ್ತಿತ್ತು. ಯಕ್ಷಗಾನಕ್ಕೆ ಮುಕ್ಕಾಲು ಜೀವವನ್ನು ಅವರು ತಮ್ಮ ಭಾವಪೂರ್ಣವಾದ ಹಾಡುಗಾರಿಕೆಯಲ್ಲಿಯೇ ತುಂಬುತ್ತಿದ್ದರು. ದುಃಖದ ಶೈಲಿಯ ಹಾಡುಗಳನ್ನು ನೆಬ್ಬೂರರು ಹಾಡುತ್ತಿದ್ದರೆ ರಂಗದ ಮೇಲಿನ ಕಲಾವಿದ ತಂತಾನೆಯೇ ಅಳುತ್ತಿದ್ದ.

## ಅಭಿಮಾನವೇ ಆಸ್ತಿ

ಬೇಜಾರಿನ ಸಂಗತಿ ಏನೆಂದರೆ ಇಷ್ಟು ಪ್ರತಿಭಾವಂತ ಕಲಾವಿದನಾದರೂ ಅವರು ಕಡುಬಡತನದಲ್ಲಿಯೇ ಕಳೆಯಬೇಕಾಯ್ತು. ಅವರಿಗೆ ಒಂದು ಅರ್ಧ ಎಕರೆ ತೋಟವೂ ಇಲ್ಲ. ಮನೆ ಎಂದರೆ ಒಂದು ಸಣ್ಣ ಗುಡಿಸಲು ಇದ್ದ ಹಾಗಿದೆ. ಐದಾರು ದಶಕಗಳ ಕಾಲ ಯಕ್ಷಗಾನದಲ್ಲಿ ದುಡಿದು, ಅಷ್ಟೊಂದು ಕೊಡುಗೆ ನೀಡಿದ ಅವರು ಸಂಪಾದಿಸಿದ್ದು ಏನೂ ಇಲ್ಲ. ಅವರ ಬಡತನ ಹೇಗಿತ್ತು ಅಂದ್ರೆ, ಅವರ ಮನೆಯಲ್ಲಿ ಒಂದು ಶ್ರಾದ್ಧವೋ, ಸತ್ಯನಾರಾಯಣ ಕಥೆಯೋ ಏನೋ ಕಾರ್ಯಕ್ರಮ ಆದರೆ ಅವರ ಅಭಿಮಾನಿಗಳು, ಊರವರೇ ಅಕ್ಕಿ, ಸಾಮಾನುಗಳನ್ನು ತಂದುಕೊಟ್ಟು ಕಾರ್ಯಕ್ರಮ ಮಾಡಿಕೊಟ್ಟು ಹೋಗುತ್ತಿದ್ದರು. ಅಂಥ ಅಭಿಮಾನಿಗಳೂ ಅವರಿಗೆ ಇದ್ದರು. ಆ ಅಭಿಮಾನವೊಂದನ್ನು ಬಿಟ್ಟರೆ ಇನ್ನೇನೂ ಸಂಪಾದನೆ ಮಾಡುವುದು ಅವರಿಗೆ ಸಾಧ್ಯವಾಗಲೇ ಇಲ್ಲ. ಅವರ ಪ್ರತಿಭೆಗೆ ಸರ್ಕಾರ ಪದ್ಮಭೂಷಣವನ್ನಾದರೂ ಕೊಡಬೇಕಾಗಿತ್ತು.

ಯಕ್ಷಗಾನ ಕ್ಷೇತ್ರದಲ್ಲಿ ಒಂದು ಭಾವಪೂರ್ಣ ಹಾಡುಗಾರಿಕೆಯ 'ಜಾಗ'ವೊಂದು ನೆಬ್ಬೂರರ ನಿಧನದಿಂದ ಖಾಲಿಯಾಗಿದೆ. ಆ ಜಾಗವನ್ನು ತುಂಬಲಿಕ್ಕೆ ಯಾರಿಗೂ ಸಾಧ್ಯವಿಲ್ಲ. ಅವರ ಪದ್ಯಗಳ ನೆನಪಿನಲ್ಲಿಯೇ ನಾವು ಮುಂದೆ ಹೋಗಬೇಕಷ್ಟೆ.

ರಾಜ ಹರಿಶ್ಚಂದ್ರ ರಾಜ್ಯಭ್ರಷ್ಟನಾಗಿ ಪತ್ನಿ, ಮಗನೊಟ್ಟಿಗೆ ಅಲೆಯುತ್ತಿದ್ದಾನೆ. ದುಃಖತಪ್ತ ಹರಿಶ್ಚಂದ್ರನ ವೇಷದಲ್ಲಿ ಕೆರೆಮನೆ ಶಂಭು ಹೆಗಡೆ ಅವರು ಪ್ರೇಕ್ಷಕರ ಕತ್ತಿನ ಸೆರೆಯುಬ್ಬುವಂತೆ ನಟಿಸುತ್ತಿದ್ದರೆ, ಕಿವಿಗಳಲ್ಲಿ ನಿಧಾನಲಯದಲ್ಲಿ ಮಾರ್ದನಿಸುತ್ತಿದ್ದ ನೆಬ್ಬೂರರ ಗಾಯನ ಸುಡುಸುಡು ವಿಷಾದವನ್ನು ಮನಸಲ್ಲಿ ಸುರಿಯುತ್ತಿತ್ತು.

'ಹಲವು ಗಿರಿ ಕಾನನವ ಕಳೆಯುತ/ ಇಳೆಯ ಪತಿ ಬರುತಿರಲು ಮುಂದಕೆ/ ಹೊಳೆವ ಭಾಗೀರತಿಯು ತೋರಿದಳಾಗ ಭೂಪತಿಗೆ...' ಎಂಬ ಸಾಲುಗಳ ಭಾಗೀರತಿಯ ಒಡಲೊಳಗಿನ ಸುಳಿಯಂತೇ ಸುಳಿಸುಳಿದು ಮನಸ್ಸನ್ನು ಹಿಂಡಿ ಕಣ್ಣೀರನ್ನು ಉಕ್ಕಿಸುತ್ತಿದ್ದವು.

ಇದು ನೆಬ್ಬೂರು ನಾರಾಯಣ ಭಾಗವತರ ಗಾಯನಶಕ್ತಿಯ ಒಂದು ಝಲಕ್ ಅಷ್ಟೆ. ಸುಮಾರು ಆರು ದಶಕಗಳ ಕಾಲದ ಯಕ್ಷಗಾಯನದ ತಮ್ಮ ಸುದೀರ್ಘ ಪಯಣದಲ್ಲಿ ಅವರು ಇಂಥ ಅದೆಷ್ಟೋ ಹಾಡುಗಳನ್ನು ಸಹೃದಯರ ಮನಸೊಳಗೆ ಎಂದೂ ಅಳಿಯದಂತೆ ಬಿತ್ತಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ನೆಬ್ಬೂರು ಅವರ ಹುಟ್ಟೂರು. ಕೆರೆಮನೆ ಶಿವರಾಮ ಹೆಗಡೆ ಅವರ ಬಳಿ ಯಕ್ಷದೀಕ್ಷೆ ಪಡೆದ ಅವರು ಸುಮಾರು ಐದು ದಶಕಗಳ ಕಾಲ ಇಡಗುಂಜಿ ಮೇಳದಲ್ಲಿ ಭಾಗವತಿಕೆ ಮಾಡಿದರು. ಊರಿನಲ್ಲಿ 'ನಾಣಿ ಭಾಗವತ'ರಾಗಿಯೂ ಯಕ್ಷಲೋಕದಲ್ಲಿ 'ನೆಬ್ಬೂರು ಭಾಗವತ'ರಾಗಿಯೂ ಅಪಾರ ಅಭಿಮಾನಿಗಳ ಪ್ರೀತಿ ಗಳಿಸಿದ್ದ ಅವರು ವಿದೇಶಗಳಲ್ಲಿಯೂ ಯಕ್ಷಗಾಯನ ಕಂಪು ಉಣಿಸಿ ಬಂದವರು.

ಇವರಿಗೆ 1996ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ, 2002ರಲ್ಲಿ ಕೆರೆಮನೆ ಶಿವರಾಮ ಹೆಗಡೆ ಪ್ರಶಸ್ತಿ, 2006ರಲ್ಲಿ ಗೋಪಾಲಕೃಷ್ಣ ಶೇಣಿ ಪ್ರಶಸ್ತಿ ಸಂದಿದೆ. ಜಿ.ಎಸ್. ಭಟ್ಟ ಸಂಪಾದಿಸಿದ 'ನೆಬ್ಬೂರು ನಿನಾದ' ಅವರ ಆತ್ಮಕಥೆ.

ನಿರೂಪಣೆ: ಪದ್ಮನಾಭ ಭಟ್